**ಶ್ರೀ ರಾಮಕೃಷ್ಣ ಹೆಗಡೆ.**— ಮಾನ್ಯ ಅಧ್ಯಕ್ಷರೆ, ಎಲ್ಲೆಲ್ಲಿ ಸ್ವಾತಂತ್ರ್ಯ ಯೋಧರು ತೀರಿಕೊಳ್ಳುತ್ತಾರೆ ಅಲ್ಲೆಲ್ಲಾ ವೀರಗಲ್ಲುಗಳನ್ನು ಹಾಕಲಿಕ್ಕೆ ಸಾಧ್ಯವಾಗುವುದಿಲ್ಲ. ಕೆಲವು ಕಡೆ ಬ್ರಿಟಿಷ್ ಸರ್ಕಾರದವರು ಗೋಲಿಬಾರ್ ಮಾಡಿದಾಗ ಬಹಳ ಜನ ಸತ್ತಂತಹ ಜಾಗಗಳಲ್ಲಿ ಸ್ಮಾರಕಗಳನ್ನು ಕಟ್ಟಿಸಿದ್ದಾರೆ. ಉದಾಹರಣೆಗೆ ಮದ್ದೂರಿನ ಶಿವಪುರದಲ್ಲಿ ವೀರಯೋಧರ ಸ್ಮಾರಕವಾಗಿ ಒಂದು ಸೌಧವನ್ನು ಕಟ್ಟಿಸಿದ್ದಾರೆ. ಅದೇ ರೀತಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನಲ್ಲಿ ಒಂದು ಸ್ಮಾರಕ ಕಟ್ಟಿಸಲಾಗಿದೆ. ಕಾರವಾರ ಜಿಲ್ಲೆಯ ಅಂಕೋಲ ತಾಲ್ಲೂಕಿನಲ್ಲಿ ಒಂದು ಸ್ಮಾರಕ ಕಟ್ಟಿಸುವ ಉದ್ದೇಶವಿದೆ. ಎಲ್ಲೆಲ್ಲಿ ಬಹಳ ದೊಡ್ಡ ಆಂದೋಳನವಾಯಿತು ಎಲ್ಲಿ ಅನೇಕ ಜನ ಸಾವುನೋವುಗಳಿಗೆ ಗುರಿಯಾದರು ಅಂತಹ ಕಡೆ ಸ್ಮಾರಕಗಳನ್ನು ಕಟ್ಟಿಸಲಾಗಿದೆಯೇ ಹೊರತು, ಎಲ್ಲೆಲ್ಲಿ ಸ್ವಾತಂತ್ರ್ಯ ಯೋಧರು ತೀರಿಕೊಂಡಿದ್ದಾರೆ ಅಂತಹ ಕಡೆಗಳೆಲ್ಲೆಲ್ಲಾ ವೀರಗಲ್ಲುಗಳನ್ನು ನಿಲ್ಲಿಸತಕ್ಕದ್ದು ವ್ಯವಹಾರಿಕವಾಗಿ ಕಾಣುವುದಿಲ್ಲ.

**ಶ್ರೀ ಮಲ್ಲಿಕಾರ್ಜುನ ಎ ಬನ್ನಿ.**—ಬಿಜಾಪುರ ಜಿಲ್ಲೆಯಲ್ಲಿ ನಮಗೆ ತಿಳಿದಹಾಗೆ ಹೆಚ್ಚು ಸ್ವಾತಂತ್ರ್ಯ ಯೋಧರು ಇದ್ದರು. ಆದ್ದರಿಂದ ಅಲ್ಲಿ ಸ್ವಾತಂತ್ರ್ಯ ಯೋಧರ ವೀರಸೌಧವನ್ನು ಕಟ್ಟಿಸುವ ವಿಚಾರ ಇದೆಯೆ ?

**ಶ್ರೀ ರಾಮಕೃಷ್ಣ ಹೆಗಡೆ.**— ಆದರ ಬಗ್ಗೆ ಒಂದು ಕೇಂದ್ರ ಸಮಿತಿಯನ್ನು ಮಾಡಿದ್ದೇನೆ. ಆ ಸಮಿತಿಯವರು ಸ್ಮಾರಕಗಳ ವಿಚಾರದಲ್ಲಿ ಸಮಂಜಸವಾದ ಯಾವ ಶಿಫಾರಸ್ಸುಗಳನ್ನು ಮಾಡಿದರೂ ಸರ್ಕಾರ ಕಾರ್ಯಗತ ಮಾಡುತ್ತದೆಂದು ನಾನು ಆಗಲೇ ಹೇಳಿದ್ದೇನೆ. ಮಾನ್ಯ ಸದಸ್ಯರ ಗಮನಕ್ಕೆ ಇನ್ನೊಮ್ಮೆ ತರುತ್ತಿದ್ದೇನೆ.

**ಶ್ರೀ ಎಂ. ಎಸ್. ಕೃಷ್ಣನ್.**— ಸ್ವಾತಂತ್ರ್ಯ ಯೋಧರಿಗೆ ಕೊಡುತ್ತಿರುವ ಗೌರವಧನ ಬಹಳ ಕಡಿಮೆ ಇದೆ. ಅದನ್ನು ಹೆಚ್ಚು ಮಾಡಲಿಕ್ಕೆ ಸರ್ಕಾರ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದೆಯೆ ? ಆಗಿಂದಾಗ್ಗೆ ಪುನರ್‌ವಿಮರ್ಶೆ ಮಾಡಿ ಕೊಡುತ್ತಿರುವ ಗೌರವಧನವನ್ನು ಹೆಚ್ಚು ಮಾಡುತ್ತೀರಾ ? ಅನೇಕ ಜನ ಸ್ವಾತಂತ್ರ್ಯಯೋಧರಿಗೆ ಇದು ಸಿಕ್ಕಿಲ್ಲ, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

**ಶ್ರೀ ರಾಮಕೃಷ್ಣ ಹೆಗಡೆ.**— ಮಾನ್ಯ ಕೃಷ್ಣನ್‌ರವರು ಹೇಳುವ ವಿಚಾರ ನಿಜ. ಅನೇಕ ಜನ ಸ್ವಾತಂತ್ರ್ಯಯೋಧರು ಗೌರವಧನವನ್ನು ಪಡೆಯಲಿಕ್ಕೆ ಸಾಧ್ಯವಾಗುತ್ತಿಲ್ಲ, ನಾವು ಗೌರವಧನ ಪಡೆಯಲಿಕ್ಕೆ ತ್ಯಾಗ ಮಾಡಿಲ್ಲ, ಕಷ್ಟಗಳನ್ನು ಅನುಭವಿಸಿಲ್ಲ, ಯಾವುದೇ ಪ್ರತಿಫಲ ಬರುತ್ತದೆ ಎನ್ನುವ ದೃಷ್ಟಿಯಿಂದ ನಾವು ಚಳುವಳಿ ಮಾಡಿಲ್ಲವೆಂದು ಗೌರವಧನವನ್ನು ನಿರಾಕರಿಸಿರುವ ಉದಾಹರಣೆಗಳು ಇವೆ. ಸಿಗತಕ್ಕ ಮೊತ್ತವನ್ನು ಪುನಃ ಪುನಃ ಬದಲಾಯಿಸುತ್ತಾ ಹೋಗುವುದು ಅಷ್ಟೊಂದು ಸೂಕ್ತವಾಗಿ ಕಾಣುವುದಿಲ್ಲ. ಕೇಂದ್ರ ಸರ್ಕಾರದವರು ಒಂದು ಸಲ ಬದಲಾವಣೆ ಮಾಡಿದರು, ನಮ್ಮ ಸರ್ಕಾರದವರೂ ಒಂದು ಸಲ ಬದಲಾವಣೆ ಮಾಡಿದರು, ಸ್ವಾತಂತ್ರ್ಯಯೋಧರ ಸಂಘದವರು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಹತ್ತಿರ ಒಂದು ನಿಯೋಗ ಬಂದು ಬದಲಾವಣೆ ಮಾಡಬೇಕೆಂದು ಹೇಳಿದ್ದರಿಂದ ಅದು ಬದಲಾವಣೆಯಾಯಿತು.

**ಶ್ರೀ ಬಿ. ದೊಡ್ಡ ಬೊರೇಗೌಡ.**— ಬಹುತೇಕ ರಾಜ್ಯದಲ್ಲಿ ಸ್ವಾತಂತ್ರ್ಯಯೋಧರಿಗೆ ಗೌರವಧನ ದೊರೆಯುತ್ತಿಲ್ಲ. ಕೇಂದ್ರ ಸರ್ಕಾರ ಗೌರವಧನವನ್ನು ಬಿಟ್ಟು ರಾಜ್ಯ ಸರ್ಕಾರ ಕೊಡುವವರಿಗೆ ಇನ್ನೂ ಸ್ವಲ್ಪ ಜಾಸ್ತಿ ಸಂಭಾವನೆ ಮಾಡಲಿಕ್ಕೆ ಸರ್ಕಾರ ಉದ್ದೇಶಿಸಿದೆಯೆ ?

**ಶ್ರೀ ರಾಮಕೃಷ್ಣ ಹೆಗಡೆ.**— ಸಾಕಷ್ಟು ಸಂಖ್ಯೆಯಲ್ಲಿ ಸ್ವಾತಂತ್ರ್ಯಯೋಧರಿಗೆ ಗೌರವಧನ ಸಿಗುತ್ತಿಲ್ಲವೆಂದು ಹೇಳುವುದು ಅಷ್ಟೊಂದು ನಿಜವಲ್ಲವೆಂದು ಹೇಳಲಿಕ್ಕೆ ಬಯಸುತ್ತೇನೆ. 1981ನೇ ಇಸವಿಯಲ್ಲಿ 1600 ಜನರಿಗೆ ಸಿಗುತ್ತಿತ್ತು. 1982ನೇ ಇಸವಿಯಲ್ಲಿ 2050 ಜನರಿಗೆ ಗೌರವಧನ ಸಿಗುತ್ತಿತ್ತು. 1983ನೇ ಇಸವಿಯಲ್ಲಿ ನಮ್ಮ ಸರ್ಕಾರ ಬಂದಮೇಲೆ 2468 ಜನರಿಗೆ ನಾವು ಕೊಟ್ಟಿದ್ದೇವೆ. ಅನೇಕ ಕೇಸ್‌ಗಳಲ್ಲಿ ಅರ್ಜಿ ಹಾಕುವುದು ತಡವಾಗಿದ್ದರೂ ಅದನ್ನು ಮನ್ನಿಸಿ ಅಂತಹವರಿಗೂ ಗೌರವಧನವನ್ನು ನಾವು ಕೊಟ್ಟಿದ್ದೇವೆ.

**ವಿಷಯ : ಕುಂದಾಪುರ ಸರ್ಕಾರಿ ಆಸ್ಪತ್ರೆಯಲ್ಲಿರುವ ಸಿಬ್ಬಂದಿ ಸಂಖ್ಯೆ**

**ಪ್ರಶ್ನೆ : 230(270) ಶ್ರೀ ಪ್ರತಾಪಚಂದ್ರ ಶೆಟ್ಟಿ ( ಕುಂದಾಪುರ ).**— ಮಾನ್ಯ ಆರೋಗ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕುಂದಾಪುರ ಸರ್ಕಾರಿ ಆಸ್ಪತ್ರೆಯಲ್ಲಿರುವ ಸಿಬ್ಬಂದಿ ಸಂಖ್ಯೆ ಎಷ್ಟು ;

ಆ) ವೈದ್ಯರು ಮತ್ತು ಇನ್ನಿತರ ಸಿಬ್ಬಂದಿಗಳ ದರ್ಜೆವಾರು ವಿವರವನ್ನೊದಗಿಸುವುದು ;

ಇ) ಕುಂದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಕ್ಷಕಿರಣ ಯಂತ್ರವು ಉಪಯೋಗ ಸ್ಥಿತಿಯಲ್ಲಿ ಇದೆಯೆ?

ಈ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

**ಉತ್ತರ : ಶ್ರೀ ಪಿ. ಜಿ. ಆರ್. ಸಿಂಧ್ಯ** (ಮಾನ್ಯ ಆರೋಗ್ಯ ರಾಜ್ಯ ಸಚಿವರು).— ಅ) 59

ಆ) ವಿವರಗಳನ್ನು ಅನುಬಂಧ 1ರಲ್ಲಿ ಒದಗಿಸಿದೆ.

ಇ) ಇದೆ. ಈ) ಉದ್ಭವಿಸುವುದಿಲ್ಲ.

**ಅನ.ಬಾಧ**

ಕುಂದಾಪುರದ ಸಾರ್ವಜನಿಕ ಆಸ್ಪತ್ರೆಗೆ ಮಂಜೂರಾಗಿರುವ ಮತ್ತು ಅದರಲ್ಲಿ ಕೆಲಸ ಮಾಡುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | | ಖಾಲಿ ಇರುವುದು | ಯಾವಾಗಿನಿಂದ ಖಾಲಿ |
|---|---|---|---|---|---|
| | | ಮಂಜೂರಾಗಿರುವುದು | ತುಂಬಿರುವ ಹುದ್ದೆಗಳು | | |
| 1 | 2 | 3 | 4 | 5 | 6 |
| 1. | ಒಂದನೇ ದರ್ಜೆ ಆರೋಗ್ಯಾಧಿಕಾರಿ (ಕಿರಿಯ) | 1 | 1 | — | |
| 2. | ಆರೋಗ್ಯಾಧಿಕಾರಿ ಹಾಗೂ ಸಹಾಯಕ ಶಸ್ತ್ರ ಚಿಕಿತ್ಸಕ | 3 | 3 | — | |
| 3. | ಸಹಾಯಕ ದಂತ ಚಿಕಿತ್ಸಕ | 1 | 1 | — | |
| 4. | ಸ್ಟಾಫ್ ನರ್ಸ್ | 8 | 7 | 1 | (ಗೈರು ಹಾಜರಿಯಾಗಿದ್ದಾರೆ) |
| 5. | ನರ್ಸಿಂಗ್ ಸೂಪರಿಂಟೆಂಡೆಂಟ್ (ದರ್ಜೆ 2) | 1 | 1 | — | |
| 6. | ಪ್ರಥಮ ದರ್ಜೆ ಗುಮಾಸ್ತ | 1 | 1 | — | |
| 7. | ಹೆಲ್ತ್ ವಿಸಿಟರ್ (ಟಿ ಡಿ. ಬಿ.) | 1 | 1 | — | |
| 8. | ಸೀನಿಯರ್ ಲ್ಯಾಬರೇಟರಿ ಟೆಕ್ನೀಷಿಯನ್ | 1 | — | 1 | 17-5-1977 |
| 9. | ದ್ವಿತೀಯ ದರ್ಜೆ ಗುಮಾಸ್ತ ಹಾಗೂ ಬೆರಳಚ್ಚುಗಾರ | 2 | 1 | 1 | 23-11-1971 |
| 10. | ಕ್ಷ-ಕಿರಣ ತಂತ್ರಜ್ಞ | 1 | 1 | — | |
| 11. | ಕಿರಿಯ ಪ್ರಯೋಗಶಾಲ ತಂತ್ರಜ್ಞ | 1 | 1 | — | |
| 12. | ಔಷಧಿ ಮಿಶ್ರಕರು | 3 | 2 | 1 | 4-7-80 |
| 13. | ದ್ವಿತೀಯ ದರ್ಜೆ ಗುಮಾಸ್ತ | 1 | 1 | — | |
| 14. | ದಾದಿ | 1 | 1 | — | |
| 15. | ಕ್ಷ-ಕಿರಣ ಸಹಾಯಕ | 2 | — | 2 | 25-2-1977 |
| 16 | ನಾಲ್ಕನೇ ದರ್ಜೆ ನೌಕರರು | 2 | 1 | 1 | 13-10-82 |
| 17. | ನೀರು ತರುವವರು (ನಾ.ದ.ನೌ.) | 1 | 1 | — | |
| 18. | ಅಡಿಗೆ ಮಾಡುವವರು | 2 | 2 | — | |
| 19. | ಕಾವಲುಗಾರ | 1 | 1 | — | |
| 20. | ಪ್ರಯೋಗಶಾಲಾ ಸಹಾಯಕ | 1 | 1 | — | |
| 21. | ಸ್ಯಾನಿಟರಿ ವರ್ಕರ್ | 6 | 4 | 2 | (ಇಬ್ಬರು ಕೆಲಸದಿಂದ ಗೈರು ಹಾಜರಿ) |
| 22. | ವಾರ್ಡ್ ಆಯಾ. ಸಹಾಯಕ | 1 | 8 | — | |
| | **ಪೋಸ್ಟ್‌ಪಾರ್ಟಮ್ ಸೆಂಟರ್ ಕುಂದಾಪುರ** | | | | |
| 1. | ಒಂದನೇ ದರ್ಜೆ ಆರೋಗ್ಯಾಧಿಕಾರಿ (ಕಿರಿಯ) | 1 | — | 1 | ನವೆಂಬರ್ 1981 |
| 2. | ಆರೋಗ್ಯಾಧಿಕಾರಿ ಹಾಗೂ ಸಹಾಯಕ ಶಸ್ತ್ರ ಚಿಕಿತ್ಸಕ | 1 | 1 | — | |
| 3. | ಓ. ಟಿ. ನರ್ಸ್ | 1 | 1 | — | |
| 4. | ಹಿರಿಯ ಪ್ರಯೋಗಶಾಲಾ ತಂತ್ರಜ್ಞ | 1 | — | 1 | |
| 5. | ಸ್ಟೋರ್‌ಕೀಪರ್ ಕಂ ಕ್ಲಾರ್ಕ್ | 1 | 1 | — | |
| 6. | ಹೆಲ್ತ್ ಅಸಿಸ್ಟೆಂಟ್ (ಫೀಮೇಲ್) | 1 | 1 | — | |
| 7. | ಹೆಲ್ತ್ ವರ್ಕರ್ (ಮೇಲ್) | 1 | 1 | — | |
| 8. | ಓ. ಟಿ. ಅಟೆಂಡರ್ | 1 | — | 1 | ನವೆಂಬರ್ 1981 |
| 9. | ವಾಹನ ಸಂಚಾಲಕ | 1 | — | 1 | ನವೆಂಬರ್ 1981 |
| 10. | ಹೆಲ್ತ್ ವರ್ಕರ್ (ಫೀಮೇಲ್) | 1 | 1 | — | |
| | ಒಟ್ಟು | 59 | 46 | 13 | |

**ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.**— ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರ ಪರವಾಗಿ ನಾನು ಪ್ರಶ್ನೆ ಕೇಳುತ್ತೇನೆ.

**ಅಧ್ಯಕ್ಷರು.**— ಆಗಬಹುದು.

**ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.**— ಮಾನ್ಯ ಅಧ್ಯಕ್ಷರೆ, ಕುಂದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ "ಕ್ಷ"ಕಿರಣ ಯಂತ್ರವು ಉಪಯೋಗ ಸ್ಥಿತಿಯಲ್ಲಿ ಇದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಉಪಯೋಗ ಸ್ಥಿತಿಯಲ್ಲಿದೆಯೆಂದು ಹೇಳಿದ್ದಾರೆ. ಆದರೆ ಕಳೆದ ಎರಡು ತಿಂಗಳಿಂದಲೂ ಅದು ಉಪಯೋಗ ಸ್ಥಿತಿಯಲ್ಲಿಲ್ಲ. ಅದು ಉಪಯೋಗ ಸ್ಥಿತಿಗೆ ಬರುವ ಹಾಗೆ ಕ್ರಮ ತೆಗೆದುಕೊಳ್ಳುತ್ತಾರೆಯೆ ? ಆಲ್ಲಿ ಅನೇಕ ಹುದ್ದೆಗಳು ಖಾಲಿಯಿವೆ, ಮುಖ್ಯವಾಗಿ ಸೀನಿಯರ್ ಲ್ಯಾಬರೇಟರಿ ಟೆಕ್ನೀಷಿಯನ್ ಮತ್ತು "ಕ್ಷ"ಕಿರಣ ತಂತ್ರಜ್ಞರ ಹುದ್ದೆಗಳನ್ನು ತುಂಬಲಿಕ್ಕೆ ಕೂಡಲೇ ಕ್ರಮವನ್ನು ಯಾವಾಗ ತೆಗೆದುಕೊಳ್ಳುತ್ತೀರಿ ?

**ಶ್ರೀ ಪಿ. ಜಿ. ಆರ್. ಸಿಂಧ್ಯ.** — ಮಾನ್ಯ ಅಧ್ಯಕ್ಷರೆ, ವಾಸ್ತವವಾಗಿ ಕುಂದಾಪುರದಲ್ಲಿರತಕ್ಕ "ಕ್ಷ" ಕಿರಣ ಯಂತ್ರ ಉಪಯೋಗ ಸ್ಥಿತಿಯಲ್ಲಿದೆ, ಆದನ್ನು ಉಪಯೋಗ ಮಾಡುತ್ತಿಲ್ಲ. ಮಾನ್ಯ ಸದಸ್ಯರು ಉಪಯೋಗದ ಸ್ಥಿತಿಯಲ್ಲಿದೆಯೆ ಎಂದು ಪ್ರಶ್ನೆ ಕೇಳಿದ್ದಕ್ಕೆ, ಉಪಯೋಗದ ಸ್ಥಿತಿಯಲ್ಲಿದೆ ಎಂದು ಹೇಳಿದ್ದೇನೆ. ಆಸ್ಪತ್ರೆಯ ಕಟ್ಟಡ ಮಳೆಗಾಲದಲ್ಲಿ ಸೋರುತ್ತಿದ್ದುದರಿಂದ "ಕ್ಷ"ಕಿರಣದ ಟ್ಯೂಬ್ ಹೋಗಿತ್ತು, ಅದನ್ನು ಈಗ ಸರಿಮಾಡಲಾಗಿದೆ, ಆಸ್ಪತ್ರೆಯ ಕಟ್ಟಡವನ್ನು ರಿಪೇರಿ ಮಾಡಲಿಕ್ಕೆ ಲೋಕೋಪಯೋಗಿ ಇಲಾಖೆಯವರಿಗೆ ಹೇಳಿದ್ದೇವೆ. ಸೀನಿಯರ್ ಲ್ಯಾಬರೇಟರಿ ಟೆಕ್ನೀಷಿಯನ್ ಮತ್ತು "ಕ್ಷ"ಕಿರಣ ತಂತ್ರಜ್ಞರ ಹುದ್ದೆಗಳನ್ನು ತುಂಬಲಿಕ್ಕೆ ಸರ್ಕಾರ ಪ್ರಯತ್ನಪಡುತ್ತದೆ ಮಲೆನಾಡಿಗೆ ಹೋಗಲಿಕ್ಕೆ ಜನರು ಹಿಂಜರಿಯುತ್ತಾರೆ. ಆದರೆ ಖಾಲಿ ಇರತಕ್ಕ ಹುದ್ದೆಗಳನ್ನು ತುಂಬಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.**— ಮಲೆನಾಡಿನ ಹಳ್ಳಿಗಳಿಗೆ ಹೋಗುವುದು ಬೇಡ, ತಾಲ್ಲೂಕು ಕೇಂದ್ರಗಳಿಗೆ ಹೋಗುವುದಕ್ಕೆ ಏನು ತೊಂದರೆಯಿದೆ ? ಖಾಲಿ ಇರತಕ್ಕ ಅನೇಕ ಹುದ್ದೆಗಳನ್ನು ಇಂತಿಷ್ಟು ದಿವಸಗಳಲ್ಲಿ ತುಂಬುತ್ತೇವೆಂದು ಹೇಳಿದರೆ ಸ್ವಲ್ಪ ಸಮಾಧಾನವಾಗುತ್ತದೆ.

**ಶ್ರೀ ಪಿ. ಜಿ. ಆರ್. ಸಿಂಧ್ಯ** —ಖಾಲಿ ಇರತಕ್ಕ ಹುದ್ದೆಗಳನ್ನು ತುಂಬುತ್ತೇವೆಂದು ನಾನು ಆಗಲೇ ಹೇಳಿದ್ದೇನೆ.

**ಅಧ್ಯಕ್ಷರು.**— ಮಾನ್ಯ ಸದಸ್ಯರಾದ ವಸಂತ ಬಂಗೇರಾರವರೇ ತಮ್ಮ ಪ್ರಶ್ನೆ ನಂ. 231(345) ಯನ್ನು 'ಸಿ' ಗುಂಪಿಗೆ ವರ್ಗಾವಣೆ ಮಾಡಿದ್ದೇನೆ.

**ವಿಷಯ : ಬತ್ತದ ಬೆಳೆಗೆ ಕೊಡಗಿನಲ್ಲಿ ಹಾನಿಯುಂಟಾಗಿರುವ ಬಗ್ಗೆ.**

**ಪ್ರಶ್ನೆ : 232 (481) ಶ್ರೀ ಎಮ್. ಎಮ್. ನಾನಯ್ಯ** ( ಮಡಿಕೇರಿ ).— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕೊಡಗು ಜಿಲ್ಲೆಯಲ್ಲಿ ಮಳೆಯ ಕಾರಣದಿಂದ, ಭತ್ತದ ಬೆಳೆಗೆ ಕಟಾವು ಸಮಯದಲ್ಲಿ ಹಾನಿ ಉಂಟಾಗಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬೆಳೆಗಾರರು ತಾವು ಬೆಳೆದ ಭತ್ತಕ್ಕೆ ಲೆವಿ ನೀತಿಯಿಂದ ವಿನಾಯಿತಿ ಕೊಡಬೇಕೆಂದೂ, ವ್ಯಾಪಾರಸ್ಥರು ಸರಿಯಾದ ಬೆಲೆಯನ್ನು ಕೊಡದಿರುವ ಕಾರಣ ಸರ್ಕಾರವು, ಮಾರುಕಟ್ಟೆಯ ದರವನ್ನು ಕೊಟ್ಟು, ಭತ್ತವನ್ನು ಕೊಂಡುಕೊಳ್ಳಬೇಕೆಂದೂ, ಕೇಳಿಕೊಂಡಿರುವರೇ ;

ಇ) ಈ ವಿಷಯದಲ್ಲಿ ಸರ್ಕಾರವು ತೆಗೆದುಕೊಳ್ಳಬೇಕೆಂದಿರುವ ಕ್ರಮವೇನು ?

**ಉತ್ತರ : ಶ್ರೀ ಬಸವಣ್ಣಪ್ಪ.** —ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಪ್ರಶ್ನೆಗೆ ಉತ್ತರ ಕೊಡುವರು : — ಅ) ಬಂದಿದೆ.

ಆ) ಬೆಳೆಗಾರರಿಂದ ಲೆವಿ ವಸೂಲಿ ಪದ್ಧತಿ ಈಗ ಜಾರಿಯಲ್ಲಿರುವುದಿಲ್ಲ. ಕಾರಣ ಬೆಳೆಗಾರರಿಂದ ಮಾರುಕಟ್ಟೆ ಬೆಲೆಯ ಮೇಲೆ ಭತ್ತವನ್ನು ಖರೀದಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಶ್ರೀ ಎಂ ಎಂ. ನಾನಯ್ಯ.**— ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೇ ಪ್ರಶ್ನೆಗೆ ಬಂದಿರತಕ್ಕ ಉತ್ತರ ಸರಿಯಾಗಿದೆ. 2ನೇ ಪ್ರಶ್ನೆಗೆ ಬೆಳೆಗಾರರಿಂದ ಲೆವಿ ವಸೂಲಿ ಪದ್ಧತಿ ಈಗ ಜಾರಿಯಲ್ಲಿರುವುದಿಲ್ಲ. ಕಾರಣ ಬೆಳೆಗಾರರಿಂದ ಮಾರುಕಟ್ಟೆ ಬೆಲೆಯ ಮೇಲೆ ಭತ್ತವನ್ನು ಖರೀದಿಸುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಮಿಲ್ ಪಾಯಿಂಟ್‌ನಲ್ಲೂ ಲೆವಿ ಕಲೆಕ್ಟ್ ಮಾಡುತ್ತೀರಿ. ಒಂದು ತಾಲ್ಲೂಕಿನಲ್ಲಿ 1ಲಕ್ಷ ಟನ್ ಭತ್ತವನ್ನು ವಸೂಲಿ ಮಾಡಬೇಕೆಂದು ವಿಲೇಜ್ ಆಕೌಂಟೆಂಟ್‌ಗೆ ಹೇಳಿದ್ದೀರಿ. ಒಬ್ಬ ವಿಲೇಜ್ ಆಕೌಂಟೆಂಟ್‌ಗೆ 23 ಗ್ರಾಮಗಳು ಇರುತ್ತವೆ. ಎಲ್ಲರೂ ಒಂದೇ ಸಾರಿ ವಿಲೇಜ್ ಆಕೌಂಟೆಂಟ್‌ಗೆ ಕೊಡುವುದಕ್ಕೆ ಅವರು ಸಿಗುವುದಿಲ್ಲ. ಕೆಲವು ಹುದ್ದೆಗಳು ಕೂಡ ಖಾಲಿಯಿವೆ. ಪರ್ಮಿಟ್ ಬಿಲ್ ಪಡೆದುಕೊಳ್ಳುವುದಕ್ಕೆ ರೈತರಿಗೆ ಕಷ್ಟವಾಗಿದೆ. ಮಿಲ್‌ಗಳಿಗೆ ಹೋದರೆ ಅವರು 50 ಪರ್ಸೆಂಟ್ ಲೆವಿ